# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಎಂವೈಎಸ್/1702-2021
ಮಂಡನಾಧಿಕಾರಿಗಳ ಶಾಖೆ : ಎಆರ್‌ಇ-1

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 28/03/2022.
6-4.22

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ ಪಿ.ಎಸ್.ಪುರುಷೋತ್ತಮ, ಪ್ರ.ದ.ಸಹಾಯಕ, ತಾಲ್ಲೂಕು ಕಚೇರಿ, ಸೋಮವಾರಪೇಟೆ, ಕೊಡುಗು ಜಿಲ್ಲೆ** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೊಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಮಡಿಕೇರಿ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ಪಿ.ಎಸ್.ಪುರುಷೋತ್ತಮ, ಪ್ರ.ದ.ಸಹಾಯಕ, ತಾಲ್ಲೂಕು ಕಚೇರಿ, ಸೋಮವಾರಪೇಟೆ, ಕೊಡುಗು ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಎಂ.ಎಂ.ಶಿವನ್ ಬಿನ್ ಮಾಧವನ್, ಬಾಣಾವರ ಗ್ರಾಮ, ಗೋಣಿಮರೂರು ಅಂಚೆ, ಸೋಮವಾರಪೇಟೆ, ಕೊಡಗು ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. ದೂರುದಾರರು ತಮ್ಮ ದೂರಿನಲ್ಲಿ, ತಾನು ಹಾಗೂ ತನ್ನ ಪತ್ನಿ ಶ್ರೀಮತಿ ಸಂಧ್ಯಾ ಇವರುಗಳು ಸೋಮವಾರಪೇಟೆ ತಾಲ್ಲೂಕು, ಸಿದ್ದಲಿಂಗಪುರ ಗ್ರಾಮದ ಸರ್ವೇ ನಂ: 1/1 ರಲ್ಲಿ ತಲಾ 2 ಎಕರೆ ಒತ್ತುವರಿ ಮಾಡಿಕೊಂಡು ಕಾಫಿ ಸಾಗುವಳಿ ಮಾಡುತ್ತಿದ್ದು, ಒತ್ತುವರಿ ಜಮೀನಿನ ಮಂಜೂರಾತಿ ಕೋರಿ 1985-86 ರಲ್ಲಿ ಅಕ್ರಮ-ಸಕ್ರಮ ಸಮಿತಿಯಲ್ಲಿ ನಮೂನೆ-53 ರಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಆ ಮೇರೆಗೆ ಕುಶಾಲನಗರ ಕಂದಾಯ ನಿರೀಕ್ಷಕರು ಪರಿಶೀಲಿಸಿದ ನಂತರ ಸರ್ವೇಯಾಗಿ, ಸದರಿ ಕಡತವು ಸೋಮವಾರಪೇಟೆ ತಾಲ್ಲೂಕು ಕಚೇರಿಗೆ ಬಂದಿರುತ್ತದೆ. ಸದರಿ

ಅರ್ಜಿ ಬಗ್ಗೆ ದೂರುದಾರರು ಅಕ್ರಮ-ಸಕ್ರಮ ಕಡತಗಳ ಕೇಸ್ ವರ್ಕರ್ ಆದ ಎದುರುದಾರರವರ ಬಳಿ ಬಂದು ತಮ್ಮ ಕಡತವನ್ನು ಅಕ್ರಮ-ಸಕ್ರಮ ಸಮಿತಿಯಲ್ಲಿ ಮಂಡನೆ ಮಾಡಲು ಕೇಳಿದಾಗ ಎದುರುದಾರರು ದೂರುದಾರರಿಂದ ರೂ 30,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ದಿನಾಂಕ: 26-7-2016 ರಂದು ದೂರುದಾರರು ಮತ್ತು ಅವರ ಸ್ನೇಹಿತ ದಿನೇಶ ಎದುರುದಾರರ ಬಳಿ ಕಡತಕ್ಕೆ ಸಂಬಂಧಿಸಿದಂತೆ ವಿಚಾರಿಸಿದಾಗ ಮೇಲ್ಕಂಡಂತೆ ಒಂದು ಕಡತಕ್ಕೆ ರೂ.30,000/- ಲಂಚ ಕೊಡಬೇಕು, ಇಲ್ಲವಾದಲ್ಲಿ ಅಕ್ರಮ-ಸಕ್ರಮ ಸಮಿತಿಯಲ್ಲಿ ಇಡಲು ಸಾಧ್ಯವಿಲ್ಲ ಎಂದು ಹೇಳಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರ ಸ್ನೇಹಿತ ದಿನೇಶ್ ರವರು ತಮ್ಮ ಮೊಬೈಲ್ ನಲ್ಲಿ ದಾಖಲಿಸಿಕೊಂಡಿರುತ್ತಾರೆ. ದೂರುದಾರರು ಲಂಚ ನೀಡಿ ಎದುರುದಾರರಿಂದ ಕೆಲಸ ಮಾಡಿಸಿಕೊಳ್ಳಲು ಇಷ್ಟವಿಲ್ಲದೆ ಇದ್ದುದರಿಂದ ದಿನಾಂಕ: 28-7-2016 ರಂದು ಪೊಲೀಸ್ ಉಪಾಧೀಕ್ಷಕರ ಕಚೇರಿ, ಭ್ರಷ್ಟಾಚಾರ ನಿಗ್ರಹ ದಳ, ಮಡಿಕೇರಿ, ಇವರಲ್ಲಿ ದೂರು ನೀಡಿದ್ದು, ಜೊತೆಯಲ್ಲಿ ಲಂಚದ ಬೇಡಿಕೆ ಸಂಭಾಷಣೆ ಇದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ನಂತರ ಸದರಿ ದೂರು ಮೊ.ಸಂಖ್ಯೆ: 01/2016 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7ರ ಅಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಂಡಿರುತ್ತಾರೆ.

3. ದಿನಾಂಕ: 28-07-2016 ರಂದು, ತನಿಖಾಧಿಕಾರಿಯವರು ಪಂಚರಾದ ಶ್ರೀ ಜಲ್ವಿಕರ್ ಕಲ್ಲಿಗುಡಿ, ಪಂಚ-1, ಶ್ರೀ ಎಸ್.ಉಮೇಶ್ ಪಂಚ-2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 10000/- (ಹಣದ ಡಿನಾಮಿನೇಷನ್ 1000/- x 10) ಗಳನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇದ್ದ ಸಂಭಾಷಣೆ ದಾಖಲಾಗಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಪಂಚರುಗಳು ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಪಂಚ-2 ನೋಟಿನ ವಿವರವನ್ನು ಬಿಳಿ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆಯ ಮೇರೆಗೆ ಪಂಚ-1 ಶ್ರೀ ಜಲ್ವಿಕರ್ ಕಲ್ಲಿಗುಡಿ, ಇವರು ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಿಲೀನ್ ಪೌಡರ್ ಲೇಪಿಸಿದ 10,000/- ರೂ.ಗಳ ಹಣವನ್ನು ಎಣಿಸಿ, ದೂರುದಾರರ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ನಿಗದಿತ ಸೂಚನೆಯನ್ನು ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತನ್ನ ತಲೆಯನ್ನು ಕೈಯಿಂದ ಸವರುವ ಮೂಲಕ ಸನ್ನೆ ಮಾಡಿ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ಇವರ ಜೊತೆ ನೆರಳು ಸಾಕ್ಷಿ ಪಂಚ-2 ಶ್ರೀ ಎಸ್.ಉಮೇಶ್ ಇವರು ದೂರುದಾರರ ಜೊತೆಗೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ತಿಳಿಸಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ವಹಿಸುವಿಕೆ ಪಂಚನಾಮೆಯನ್ನು ಪಂಚರ ಸಮಕ್ಷಮ 11.15 ರಿಂದ ಮಧ್ಯಾಹ್ನ 1.00 ಘಂಟೆಯವರೆಗೆ ಬರೆದಿರುತ್ತಾರೆ.

4. ಅದೇ ದಿನ ಅಂದರೆ, ದಿನಾಂಕ: 28-07-2016 ರಂದು ತನಿಖಾಧಿಕಾರಿ, ಸಿಬ್ಬಂದಿ, ದೂರುದಾರರು, ಇವುರುಗಳು ಎದುರುದಾರರ ಕಚೇರಿಗೆ ಹೊರಟು, ಮಾರ್ಗದ ಮದ್ಯದಲ್ಲಿ ಎದುರುದಾರರು ದೂರುದಾರರ ಮೊಬೈಲ್‌ಗೆ ಕರೆ ಮಾಡಿ, ಮಡಿಕೇರಿಯ ಜಿ.ಟಿ ಸರ್ಕಲ್ ಬಳಿ ಬರುವಂತೆ ತಿಳಿಸಿರುತ್ತಾರೆ. ಅದರಂತೆ, ದೂರುದಾರರು, ಪಂಚ-2 ರವರು ಜಿ.ಟಿ ಸರ್ಕಲ್‌ಗೆ ಬಂದು ಎದುರುದಾರರಿಗೆ ಮೊಬೈಲ್ ಕರೆ ಮಾಡಿದಾಗ, ಎದುರುದಾರರು ತಾನು ಚರ್ಚ್ ಕಾಂಪ್ಲೆಕ್ಸ್ ನಲ್ಲಿರುವ ಶುಚಿ-ರುಚಿ ಹೋಟೆಲ್ ಬಳಿ ಇರುವುದಾಗಿ ತಿಳಿಸಿರುತ್ತಾರೆ. ಅದರಂತೆ, ದೂರುದಾರರು, ಪಂಚ-2 ರವರೊಂದಿಗೆ ಎದುರುದಾರರನ್ನು ಬೇಟಿ ಮಾಡಿ, ಎದುರುದಾರರು ಕುಳಿತ್ತಿದ್ದ ಟೇಬಲ್ ಮುಂಭಾಗದಲ್ಲಿ ದೂರುದಾರರು ಕುಳಿತುಕೊಂಡು ಟೀ ಕುಡಿತ್ತೀರಾ ಎಂದು ಎದುರುದಾರರನ್ನು ಕೇಳಿದಾಗ, ಈಗಾಗಲೇ 2-3 ಸಲ ಕುಡಿದಿದ್ದೀನಿ ನನಗೆ ದುಡ್ಡು ಕೊಡು ಎಂದು ಒತ್ತಾಯಿಸಿದಾಗ, ದೂರುದಾರರು ತನ್ನ ಬಳಿ ಇದ್ದ ಪಿನಾಪ್ತಲಿನ್ ಪೌಡರ್ ಲೇಪಿತ ಹಣವನ್ನು ಎದುರುದಾರರಿಗೆ ನೀಡಿದಾಗ, ಅವರು ತನ್ನ ಬಲಗೈಯಿಂದ ನೋಟುಗಳನ್ನು ಪಡೆದು ತನ್ನ ಶರ್ಟನ ಮೇಲ್ಬಾಗದ ಎಡ ಜೇಬಿನಲ್ಲಿ ಇರಿಸಿಕೊಂಡಿರುತ್ತಾರೆ. ನಂತರ ದೂರುದಾರರು ಹಣವನ್ನು ಎಣಿಸಿ ನೋಡುವಂತೆ ಎದುರುದಾರರಿಗೆ ತಿಳಿಸಿದಾಗ ಅವರು ತನ್ನ ಬಲಗೈ ಯಿಂದ ಹಣವನ್ನು ಜೇಬಿನಿಂದ ತೆಗೆದು, ಎರಡೂ ಕೈಗಳಿಂದ ಎಣಿಸಿ ಪುನ: ಅದೇ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ಸಮಯ ಸಂಜೆ 5.05 ಆಗಿತ್ತು. ನಂತರ ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆ ನೀಡಿದ ನಂತರ ತನಿಖಾಧಿಕಾರಿಯವರು ಸ್ಥಳಕ್ಕೆ ಬಂದಾಗ, ದೂರುದಾರರು ತನಿಖಾಧಿಕಾರಿಗೆ ಎದುರುದಾರರನ್ನು ತೋರಿಸಿಕೊಟ್ಟ ಮೇರೆಗೆ ತನಿಖಾಧಿಕಾರಿ ಎದುರುದಾರರಿಗೆ ತನ್ನನ್ನು ಪರಿಚಯಿಸಿಕೊಂಡು, ಎದುರುದಾರರ ವಿರುದ್ಧ ಪ್ರಕರಣ ದಾಖಲಾದ ಬಗ್ಗೆ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿ ತನಿಖೆಯನ್ನು ಮುಂದುವರೆಸಿ, ತನಿಖಾಧಿಕಾರಿಯ ಸೂಚನೆ ಮೇರೆಗೆ, ಸಿಬ್ಬಂದಿಯು ಎದುರುದಾರರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೈಟ್ ದ್ರಾವಣದಿಂದ ಪ್ರತ್ಯೇಕವಾಗಿ ತೊಳೆಸಿದಾಗ, ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ, ಹಾಗೂ ತನಿಖಾಧಿಕಾರಿಯವರು ಎದುರುದಾರರಿಗೆ ಲಂಚದ ಹಣವನ್ನು ಹಾಜರುಪಡಿಸುವಂತೆ ಸೂಚಿಸಿದಾಗ ಅವರು ತನ್ನ ಶರ್ಟಿನ ಮೇಲ್ಬಾಗದ ಎಡಜೇಬಿನಲ್ಲಿದ್ದ ಹಣವನ್ನು ಹಾಜರುಪಡಿಸಿದ್ದು ಸದರಿ ಹಣವನ್ನು ತನಿಖಾಧಿಕಾರಿ ಸೂಚನೆ ಮೇರೆಗೆ ಪಂಚರು ಪರಿಶೀಲಿಸಿ ನೋಟಿನ ಮೌಲ್ಯ ಮತ್ತು ನಂಬರುಗಳನ್ನು ಖಾತ್ರಿಪಡಿಸಿಕೊಂಡಿರುತ್ತಾರೆ ಹಾಗೂ ಶರ್ಟಿನ ಎಡಬಾಗದ ಜೇಬಿನ ಒಳ ಬಾಗವನ್ನು ಸೋಡಿಯಂ ಕಾರ್ಬೋನೈಟ್ ದ್ರಾವಣದಿಂದ ತೊಳೆದಾಗ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ಶರ್ಟನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಂದ ಲಂಚದ ಹಣವನ್ನು ಪಡೆದ ಬಗ್ಗೆ, ಎದುರುದಾರರನ್ನು ಸಮಜಾಯಿಷಿ ಕೇಳಿದಾಗ, **"ಎದುರುದಾರರು ದಿನಾಂಕ: 28-07-2016 ರಂದು ನಾನು ನನ್ನ ಸ್ವಂತ ಗ್ರಾಮವಾದ ಮರಗೋಡುವಿನಿಂದ ಮಾನ್ಯ ಉಪವಿಭಾಗಾಧಿಕಾರಿಗಳು ಮಡಿಕೇರಿ ಇಲ್ಲಿಗೆ ಮಾಹಿತಿ ಹಕ್ಕು ವಿಚಾರಣೆ ಸಂಬಂಧ 11-00 ಎ.ಎಂ ಗೆ ಹಾಜರಾಗಿದ್ದು, ತದನಂತರ ಹುಜೂರ್ ಜಮಾ ಬಂಧಿ**

ಸಂಬಂಧ ಜಿಲ್ಲಾಧಿಕಾರಿಗಳ ಮೀಟಿಂಗ್ ಸಭಾಂಗಣಕ್ಕೆ ಹೋಗಿದ್ದು, ಜಮಾಬಂಧಿ ಮುಗಿದ ನಂತರ ಮದ್ಯಾಹ್ನದ ಮೇಲೆ ನನ್ನ ಸ್ವಂತ ಕೆಲಸ ಮಡಿಕೇರಿ ತಾಲ್ಲೂಕು ಕಚೇರಿಗೆ ಹೋಗಿ, ಕೆಲಸ ಮುಗಿಸಿಕೊಂಡು, ಅಂದಾಜು 4-00 ಪಿ.ಎಂ.ಗೆ ತಿಮ್ಮಯ್ಯ ವೃತ್ತದಲ್ಲಿದ್ದಾಗ, ಸಿದ್ದಲಿಂಗಪುರದ ಶಿವನ್ ಎಂಬುವರು ನನ್ನ ಮೊಬೈಲ್‌ಗೆ ಕರೆ ಮಾಡಿ, ಎಲ್ಲಿದ್ದೀರಿ ಎಂದು ವಿಚಾರಿಸಿಕೊಂಡು, ನನ್ನನ್ನು ಪಕ್ಕದ ಚರ್ಚ್‌ನ ಕಾಂಪ್ಲೆಕ್ಸ್‌ನ ಶುಚಿ-ರುಚಿ ಹೋಟೆಲ್‌ಗೆ ಕರೆದುಕೊಂಡು ಹೋಗಿ, ರೂ 10,000/- ಗಳನ್ನು ನೀಡಿದ್ದು, ಒಡನೆ ಎ.ಸಿ.ಬಿ ಪೊಲೀಸರು ಹಾಜರಾಗಿ ತಮ್ಮ ಪರಿಚಯ ಹೇಳಿಕೊಂಡು, ಟ್ರ್ಯಾಪ್ ಮಾಡಿರುತ್ತಾರೆ", ಎಂಬುದಾಗಿ ಸಮಜಾಯಿಷಿ ನೀಡಿರುತ್ತಾರೆ. ಸದರಿ ಸಮಜಾಯಿಷಿ ಬಗ್ಗೆ ತನಿಖಾಧಿಕಾರಿಯು ದೂರುದಾರರನ್ನು ಹಾಗೂ ನೆರಳು ಸಾಕ್ಷಿ ಪಂಚ-2 ರವರನ್ನು ಕೇಳಿದಾಗ ಅವರು ಸಮಜಾಯಿಷಿಯನ್ನು ಅಲ್ಲಗಳೆದ್ದು, ಎದುರುದಾರರು ಹಣವನ್ನು ದೂರುದಾರರಿಂದ ಕೇಳಿ ಪಡೆದಿರುತ್ತಾರೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರಾದ ನಿಮ್ಮನ್ನು ಅಂದೇ ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿಯವರು ಟ್ರಾಪ್ ಪಂಚನಾಮೆಯನ್ನು ದಿ: 28/07/2016ರಂದು ಸಂಜೆ 5.15 ರಿಂದ ರಾತ್ರಿ 08.00 ಗಂಟೆಯವರೆಗೆ ಪಂಚರ ಸಮಕ್ಷಮ ಬರೆದಿರುತ್ತಾರೆ.

5. ಸಿಡಿಗಳಲ್ಲಿ ದಾಖಲಾದ ಸಂಭಾಷಣೆ, ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಇರುವುದಾಗಿ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿದೆ.

6. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

7. ಗೌರವಾನ್ವಿತರ ಆದೇಶದ ಅನ್ವಯ, ಎದುರುದಾರರಿಗೆ ದಿ: 13/09/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 07/10/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಯಲ್ಲಿ ನಮೂದಿಸಿರುವ ಅಪಾದನೆಗಳನ್ನು ಸಾರಸಗಟವಾಗಿ ಅಲ್ಲಗಳೆದಿರುತ್ತಾರೆ. ಹಾಗೂ ತನ್ನ ವಿರುದ್ಧ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ನಡೆಯುತ್ತಿರುವ Spl.Case No: 36/2018 ಅಂತಿಮ ಹಂತಕ್ಕೆ ತಲುಪಿದ್ದು, ಅದರಲ್ಲಿ ಮಾಡಿರುವ ಆರೋಪಗಳು ಸಹ ಸುಳ್ಳಾಗಿರುತ್ತವೆಂದು ಹೇಳಿರುತ್ತಾರೆ. ನಂತರ, ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆ 2(i) ರಿಂದ (vi) ರವರೆಗೆ ಅಂಶಗಳನ್ನು ಸಾರಸಗಟವಾಗಿ ಅಲ್ಲಗಳೆದಿರುತ್ತಾರೆ. ಮುಂದುವರೆದು, ತನ್ನ ತಮ್ಮನಾದ ಲತ್ತೇಶ್ ಕುಮಾರ್ ಹಾಗೂ ದೂರುದಾರರು ಇಬ್ಬರೂ ಸ್ನೇಹಿತರಿದ್ದು, ಪಾಲುದಾರಿಕೆಯಲ್ಲಿ ಶುಂಠಿ ವ್ಯಾಪಾರ ಮಾಡುತ್ತಿದ್ದು, ಸದರಿ ವ್ಯವಹಾರದಿಂದ ದೂರುದಾರರು ತನ್ನ ತಮ್ಮನನ್ನು ಹೊರಹಾಕಿದ್ದು, ಹಾಗೂ ತನ್ನ ತಮ್ಮನಿಗೆ ಅವನ ಪಾಲಿನ ಬಂಡವಾಳ

ಹಾಗೂ ಲಾಭಾಂಶವನ್ನು ಸಹ ನೀಡಿರುವುದಿಲ್ಲ. ತನ್ನ ತಮ್ಮ ದೂರುದಾರರಿಗೆ ತನ್ನ ಪಾಲಿನ ಹಣಕ್ಕೆ ಒತ್ತಾಯಿಸಿದಾಗ, ದೂರುದಾರರು ಸುಳ್ಳು ದೂರು ತನ್ನ ಮೇಲೆ ನೀಡಿರುತ್ತಾರೆಂದು ಹೇಳಿರುತ್ತಾರೆ. ತಾನು ದೂರುದಾರರಲ್ಲಿ ಯಾವುದೇ ಲಂಚದ ಹಣಕ್ಕೆ ಬೇಡಿಕೆ ಇಟ್ಟಿಲ್ಲ, ಹಾಗೂ ಪಡೆದಿಲ್ಲ. ಹಾಗಾಗಿ ತನ್ನನ್ನು ಇಲಾಖಾ ವಿಚಾರಣೆಯಿಂದ ಕೈಬಿಡಬೇಕೆಂದು ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಹಾಗಾಗಿ ಇವರ ವಿರುದ್ಧ ವಿಚಾರಣೆ ಮಾಡದೆ ಇರಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ.

8. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

9. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೇ, ಕರ್ತವ್ಯ ಶ್ರದ್ದೆಯನ್ನು ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

6/4/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು